<u>**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**</u>

<u>**ಎಸ್.ಸಿ. ಸಂಖ್ಯೆ: 79/2022**</u>

ಫ್ರಾಸಾ .03

ಚಾಸಾ. 01

**ಸಾಕ್ಷಿಗೆ ದಿಃ 24-06-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

<u>**ಪಾಟೀಸವಾಲು 1 ನೇ ಆರೋಪಿತನ ಪರ ಶ್ರೀ ಎ.ವಿ. ಇ ವಕೀಲರಿಂದಃ**</u>

ಪ್ರಶ್ನೆಃ ನೀವು ನಿಮ್ಮ ಸಾಕ್ಷಿಯಲ್ಲಿ ಈ ಆರೋಪಿಯೇ ಈ ಕೃತ್ಯ ಎಸಗಿದ್ದಾನೆಂದು ಹೇಳಿದ್ದೀರಾ?

ಉತ್ತರಃ ಹೌದು ಹೇಳಿದ್ದೇನೆ.

ನಾನು ದೂರಿನಲ್ಲಿ 1 ನೇ ಆರೋಪಿಯೇ ಕೊಲೆ ಮಾಡಿದ್ದಾನೆಂದು ಹೇಳಿಲ್ಲ ಅಂದರೆ ಸರಿಯಲ್ಲ. ಪೋಲೀಸರ ಆರೋಪಿಯನ್ನು ಕರೆದುಕೊಂಡು ಬಂದಾಗ ನನಗೆ ತೋರಿಸಿದಾಗ ಅವನು ಉಳಿದ ಆರೋಪಿಗಳ ಸ್ನೇಹಿತನಾಗಿದ್ದಾನೆಂದು ಹೇಳಿ ಸಂಶಯದ ಮೇಲೆ ಈ 1 ನೇ ಆರೋಪಿ ಕೂಡ ಮಾಡಿದ್ದಾನೆಂದು ಹೇಳಿದ್ದೇನೆ ಅಂದರೆ ಸರಿಯಲ್ಲ.

ಪ್ರಶ್ನೆಃ ದೂರು ಕೊಡುವಾಗ ಈ ಆರೋಪಿಯ ಮೇಲೆ ಸಂಶಯ ಇದೆ ಎಂದು ಮಾತ್ರ ಹೇಳಿರುವುದರಿಂದ 1 ನೇ ಆರೋಪಿಗೂ ಸಂಬಂಧವಿಲ್ಲ?

ಉತ್ತರಃ ದೂರಿನಲ್ಲಿ ಬಲವಾದ ಸಂಶಯವಿದೆ ಎಂದು ಬರೆದಿರುವುದು ನಿಜ ಆನಂತರ ಪೋಲೀಸರು ಸಿಸಿ ಟಿ ವಿ ಕ್ಯಾಮೆರಾ ತೋರಿಸಿದಾಗ 1 ನೇ ಆರೋಪಿಯು ಈ ಕೃತ್ಯ ಎಸಗಿದ್ದಾರೆಂದು ಗೊತ್ತಾಯಿತು. ದೂರನ್ನು ನಾನು ಬರೆದಿಲ್ಲ ಅಂದರೆ ಸರಿಯಲ್ಲ. ಮತ್ತೆ ಸಾಕ್ಷಿ ಹೇಳುವುದನೆಂದರೆ ನನ್ನ ಸ್ನೇಹಿತನ ಕಡೆಯಿಂದ ಬರೆಸಿರುತ್ತೇನೆ. ಅದರಲ್ಲಿ ಎನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಅವನು ಬರೆದಿದ್ದಾನೆ.

ಪ್ರಶ್ನೆಃ ಎಷ್ಟನೆ ತಾರೀಕಿಗೆ ದೂರು ಕೊಟ್ಟಿದ್ದೀರಿ?

ಉತ್ತರಃ ಅವರು ಮಿಸ್ ಆದ ಮಾರನೇ ದಿನ ದೂರು ಕೊಟ್ಟಿದ್ದೇವೆ , 26 ಅಥವಾ 27 ಇರಬಹುದು. ನನ್ನ ತಮ್ಮನ ಗಾಡಿ ಎಂಟಾರ್ಕ ಸ್ಕೂಟಿ ಗಾಡಿ ಇತ್ತು, ನಂಬರ ಪ್ಲೇಟ ಇರಲಿಲ್ಲ.

ಎಸ್.ಸಿ. ಸಂಖ್ಯೆ 79/2022

ಫ್ರಾಸಾ-3

ಆರೋಪಿ ವಕೀಲರು ಪಾಟಿ ಸವಾಲು ಮುಂದೂಡಲು ಸಮಯ ಕೇಳಿರುತ್ತಾರೆ. ಪಾಟಿ ಸವಾಲು ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(ಬಿ. ಎಸ್. ಭಾರತಿ )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.